# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 428 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಶರವಣ ಟಿ.ಎ<br>(ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 10.07.2023 |
| ಉತ್ತರಿಸುವ ಸಚಿವರು | : | ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಾಶಾಸ್ತ್ರ ಇಲಾಖಾ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ರಾಜ್ಯದಲ್ಲಿ ಅನ್ನಭಾಗ್ಯ ಯೋಜನೆ ನಿರಾತಂಕವಾಗಿ ಸಾಗಲು ಸರ್ಕಾರ ಯಾವ ರೀತಿಯ ಶಾಶ್ವತ ಕ್ರಮ ಕೈಗೊಂಡಿದೆ; ಈ ಯೋಜನೆ ಜಾರಿಗೆ ಇರುವ ಅಡ್ಡಿಗಳೇನು; ಈ ಯೋಜನೆ ಜಾರಿಗೆ ಸರ್ಕಾರಕ್ಕೆ ಬೇಕಾಗುವ ಹಣ ವಿಷ್ಟು; | ರಾಜ್ಯದಲ್ಲಿರುವ ಪಡಿತರ ಚೀಟಿಗಳನ್ನು ಸಂಪೂರ್ಣವಾಗಿ ಗಣಕೀಕರಣಗೊಳಿಸಲಾಗಿದೆ. ಪ್ರತಿ ತಿಂಗಳು ಜಿಲ್ಲೆ/ತಾಲ್ಲೂಕು/ ಸಗಟು ಗೋದಾಮು ಮತ್ತು ನ್ಯಾಯಬೆಲೆ ಅಂಗಡಿ ಮಟ್ಟದವರೆಗಿನ ಆಹಾರ ಧಾನ್ಯ ಹಂಚಿಕೆಯಿಂದ ಪ್ರಾರಂಭಗೊಂಡು, ನ್ಯಾಯಬೆಲೆ ಅಂಗಡಿಗಳಲ್ಲಿ ಫಲಾನುಭವಿಗಳಿಗೆ ಪಡಿತರ ವಿತರಣೆಯವರೆಗಿನ ಸಂಪೂರ್ಣ ಕಾರ್ಯವನ್ನು Online ಮೂಲಕ ಜಾರಿಗೊಳಿಸಲಾಗಿದೆ. ಹಾಗೂ ಎಲ್ಲಾ ಫಲಾನುಭವಿಗಳ ವಿವರಗಳನ್ನು ಆಧಾರ್‌ನೊಂದಿಗೆ ಹೊಂದಾಣಿಕೆ ಮಾಡಲಾಗಿದ್ದು, ಪಡಿತರ ವಿತರಣೆಯನ್ನು ಆಧಾರ್ ಬಯೋಮೆಟ್ರಿಕ್, POS ವ್ಯವಸ್ಥೆ ಮೂಲಕ ಜಾರಿಗೊಳಿಸಲಾಗಿದೆ.<br><br>ರಾಜ್ಯದಲ್ಲಿರುವ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು 05 ಕೆ.ಜಿ. ಆಹಾರ ಧಾನ್ಯವನ್ನು ವಿತರಿಸಲು ಅಗತ್ಯವಿರುವ ಅಕ್ಕಿಯನ್ನು ಮುಕ್ತ ಮಾರುಕಟ್ಟೆಯಿಂದ ಖರೀದಿಸಲು, ಮುಕ್ತ ಟೆಂಡರ್ ನ್ನು ಕರೆಯಲು ನಿರ್ಧರಿಸಲಾಗಿದೆ. ಸದರಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡು ಅಕ್ಕಿ ಸರಬರಾಜು ಆಗುವವರೆಗೆ 2023ರ ಜುಲೈ ಮಾಹೆಯಿಂದ ಜಾರಿಗೆ ಬರುವಂತೆ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಹೆಚ್ಚುವರಿ 05 ಕೆ.ಜಿ. ಆಹಾರ ಧಾನ್ಯದ ಬದಲಾಗಿ ಪ್ರತಿ ಕೆ.ಜಿ.ಗೆ ರೂ.34/-ರ ದರದಲ್ಲಿ ನಗದು ಹಣವನ್ನು ಪಡಿತರ ಫಲಾನುಭವಿಯ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ DBT ಮೂಲಕ ವರ್ಗಾಯಿಸಲು ನಿರ್ಧರಿಸಲಾಗಿದೆ. ಇದಕ್ಕೆ ಪ್ರತಿ ಮಾಹೆಗೆ ಅಂದಾಜು ರೂ.841.46 ಕೋಟಿ ಆಗಲಿದೆ. |

| | | |
|---|---|---|
| ಆ | ಅನ್ನಭಾಗ್ಯ ಯೋಜನೆಯಡಿ ಅಕ್ಕಿ ಹಂಚಲು ಪ್ರಸ್ತುತ ಸರ್ಕಾರದ ಬಳಿ ಎಷ್ಟು ಅಕ್ಕಿ ಸಂಗ್ರಹವಿದೆ ಮತ್ತು ಎಷ್ಟು ತಿಂಗಳಿಗೆ ಸಾಕಾಗುವುದು; ಉಳಿದ ಪ್ರಮಾಣದ ಅಕ್ಕಿಯನ್ನು ಸಂಗ್ರಹಿಸಲು ಈ ಬಗ್ಗೆ ಕೇಂದ್ರ ಸರ್ಕಾರ ಇತರೆ ರಾಜ್ಯ ಸರ್ಕಾರದ ಜೊತೆ ಹಾಗೂ ಮತ್ತಿತರೆ ಸಂಸ್ಥೆಗಳ ಜೊತೆ ನಡೆಸಿರುವ ಪತ್ರ ವ್ಯವಹಾರದ ವಿವರಗಳನ್ನು ನೀಡುವುದು; | ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ವಯ ಪ್ರತಿ ಮಾಹೆ-217403 ಮೆಟ್ರಿಕ್ ಟನ್ ಅಕ್ಕಿಯನ್ನು ಕೇಂದ್ರ ಸರ್ಕಾರವು ಉಚಿತವಾಗಿ ನೀಡುತ್ತಿದ್ದು, ಒಂದು ತಿಂಗಳಿಗೆ ಪ್ರತಿಯೊಬ್ಬ ಅಂತ್ಯೋದಯ ಮತ್ತು ಆದ್ಯತಾ ಪಡಿತರ ಫಲಾನುಭವಿಗೆ ತಲಾ 10 ಕೆ.ಜಿ ಯಂತೆ ಅಕ್ಕಿ ವಿತರಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಪ್ರತಿ ತಿಂಗಳು ಮುಕ್ತ ಮಾರುಕಟ್ಟೆಯಿಂದ 2.29 ಲಕ್ಷ ಮೆ.ಟನ್ ಅಕ್ಕಿಯನ್ನು ಖರೀದಿಸಬೇಕಾಗುತ್ತದೆ. ಮೇಲಿನಂತೆ ಪ್ರತಿ ತಿಂಗಳು ಅಗತ್ಯವಿರುವ ಅಕ್ಕಿಯನ್ನು ಭಾರತ ಆಹಾರ ನಿಗಮದಿಂದ ಪೂರೈಕೆಯಾಗುತ್ತಿದ್ದು, ಅನ್ನಭಾಗ್ಯ ಯೋಜನೆಯಡಿ ಹೆಚ್ಚುವರಿ ಅಗತ್ಯವಿರುವ ಅಕ್ಕಿಯನ್ನು ಒದಗಿಸುವಂತೆ ಕೇಂದ್ರ ಸರ್ಕಾರಕ್ಕೆ ಪತ್ರ ವ್ಯವಹಾರ ನಡೆಸಲಾಗಿದೆ ಹಾಗೂ ಛತ್ತೀಸಗಡ, ತೆಲಂಗಾಣ, ಪಂಜಾಬ್ ರಾಜ್ಯಗಳನ್ನು ಸಂಪರ್ಕಿಸಲಾಗಿದೆ. ಹಾಗೂ ಸದರಿ ಯೋಜನೆಯಡಿ ಹೆಚ್ಚುವರಿ ಅಗತ್ಯವಿರುವ ಅಕ್ಕಿಯನ್ನು ಎನ್ .ಸಿ.ಸಿಎಫ್. ನಾಫೆಡ್ ಮತ್ತು ಕೇಂದ್ರೀಯ ಭಂಡಾರ ಸಂಸ್ಥೆಗಳಿಂದ ಪಡೆಯಲು ಕ್ರಮವಹಿಸಲಾಗಿದೆ. ಆದರೆ ಜುಲೈ ಮಾಹೆಗೆ ಅಕ್ಕಿ ಲಭ್ಯವಿರದ ಕಾರಣ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಹೆಚ್ಚುವರಿ 05 ಕೆ.ಜಿ. ಆಹಾರ ಧಾನ್ಯದ ಬದಲಾಗಿ ಪ್ರತಿ ಕೆ.ಜಿ.ಗೆ ರೂ.34/-ರ ದರದಲ್ಲಿ ನಗದು ಹಣವನ್ನು ಪಡಿತರ ಫಲಾನುಭವಿಯ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ DBT ಮೂಲಕ ವರ್ಗಾಯಿಸಲು ನಿರ್ಧರಿಸಲಾಗಿದೆ. |
| ಇ | ಈ ಯೋಜನೆಯಡಿಯಲ್ಲಿ ಅಕ್ಕಿ ಬದಲಿಗೆ ರಾಗಿ, ಜೋಳ, ಗೋಧಿ ವಿತರಿಸುವ ಉದ್ದೇಶ ಇದೆಯೇ; ಹಾಗಿದ್ದಲ್ಲಿ ಎಷ್ಟು ಪ್ರಮಾಣದಲ್ಲಿ ವಿತರಿಸಲಾಗುವುದು? | ರಾಜ್ಯದಲ್ಲಿ ಕನಿಷ್ಟ ಬೆಂಬಲ ಬೆಲೆ ಯೋಜನೆಯಡಿ ರೈತರಿಂದ ಖರೀದಿಸುವ ರಾಗಿ ಮತ್ತು ಜೋಳವನ್ನು ಕೇಂದ್ರ ಸರ್ಕಾರದ ಲೆಕ್ಕದಲ್ಲಿ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಪಡಿತರ ಫಲಾನುಭವಿಗಳಿಗೆ ವಿತರಿಸಲಾಗುತ್ತಿದೆ. ಪ್ರಾದೇಶಿಕ ಪರಿಸ್ಥಿತಿಗನುಗುಣವಾಗಿ ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಎರಡು ಕೆ.ಜಿ ಅಕ್ಕಿಯ ಬದಲಾಗಿ ಜೋಳವನ್ನು ಹಾಗೂ ದಕ್ಷಿಣ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ಎರಡು ಕೆ.ಜಿ ಅಕ್ಕಿಯ ಬದಲಾಗಿ ರಾಗಿಯನ್ನು ವಿತರಿಸಲಾಗುತ್ತಿದೆ. |

ಅನಾಸ 122 ಡಿಆರ್‌ಎ 2023 (ಇ-ಆಫೀಸ್)

(ಕೆ.ಹೆಚ್.ಮುನಿಯಪ್ಪ)
ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ
ವ್ಯವಹಾರಗಳ ಹಾಗೂ ಕಾನೂನು ಮಾಪನಾಶಾಸ್ತ್ರ
ಇಲಾಖಾ ಸಚಿವರು